**<u>1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ಚನ್ನಗಿರಿ</u>**

**<u>ಸಿ.ಸಿ.ನಂಬರ್ 581/2022</u>**

**ಪಿರ್ಯಾದುದಾರರು :** **ವಿರುದ್ಧ** **ಆರೋಪಿತರು:**

| | |
|---|---|
| ಚನ್ನಗಿರಿ ಪೊಲೀಸ್ ಠಾಣೆ | ಶ್ರೀನಿವಾಸ ಬಿನ್ ಬನಪ್ಪ<br>ವಯಸ್ಸುಃ 26 ವರ್ಷ,<br>ವಾಸಃ ದೇವರಹಳ್ಳಿ ಗ್ರಾಮ, ಚನ್ನಗಿರಿ<br>ತಾ ದಾವಣಗೆರೆ ಜಿಲ್ಲೆ |

**<u>-:: ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಹೆಚ್ಚುವರಿ ಆರೋಪಿತನ ಹೇಳಿಕೆ ::-</u>**

ಪ್ರಶ್ನೆ-1) ಈ ಪ್ರಕರಣದಲ್ಲಿ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೇಳಿದ್ದೀರಾ? ತಿಳಿಯಿತೇ?

ಉತ್ತರಃ

ಪ್ರಶ್ನೆ-2) ಚಾಸಾ-1 ಕೃಷ್ಣಮೂರ್ತಿರವರು ತಮ್ಮ ಸಾಕ್ಷ್ಯದಲ್ಲಿ ದಿಃ 04.03.2022 ರಂದು ತಹಶಿಲ್ದಾರ್ ಕಚೇರಿಯಲ್ಲಿ ಗಲಾಟೆ ನಡೆದಿದ್ದು, ಆ ಸಮಯಕ್ಕೆ ಆರೋಪಿಯು ನನ್ನನ್ನು ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿರುತ್ತಾರೆ. ಆರೋಪಿಯು ಅಕ್ರಮವಾಗಿ bonofide certificate ನ್ನು ಪಡೆದು ಟ್ರಾಕ್ಟರ್ ನೋಂದಣಿ ಮಾಡಿಸಿಕೊಂಡಿದ್ದು, ಸದರಿ ವಿಚಾರ ನನಗೆ ತಿಳಿದ ನಂತರ ನಾನು ತಹಶಿಲ್ದಾರ್ ರವರಿಗೆ ದೂರನ್ನು ದಾಖಲಿಸಿರುತ್ತೇನೆ. ನಂತರ ಸದರಿ ವಿಚಾರವಾಗಿ ತಹಶಿಲ್ದಾರ್ ಕಚೇರಿಯಲ್ಲಿ ವಿಚಾರಣೆ ಮುಗಿಸಿಕೊಂಡು 3.30 ರಿಂದ 4.30 ರ ಸಮಯದಲ್ಲಿ ಹೊರಬರುವಾಗ ಆರೋಪಿಯು ಜೀವ ಬೆದರಿಕೆ ಹಾಕಿರುತ್ತಾರೆ. ಸದರಿ ವಿಚಾರವಾಗಿ ಚನ್ನಗಿರಿ ಪೊ.ಠಾಣೆಯಲ್ಲಿ ನಾನು ದೂರನ್ನು 24.03.2022 ರಂದು ಸಲ್ಲಿಸಿರುತ್ತೇನೆ. ದಿಃ 25.03.2022 ರಂದು ತಾಲ್ಲೂಕು ಕಚೇರಿಯ ಮುಂಭಾಗದ ಗೇಟಿನ ಹತ್ತಿರ ಮಧ್ಯಾಹ್ನ 12.00 ಗಂಟೆಯಿಂದ 01.00 ಗಂಟೆಯವರೆಗೆ ಪೊಲೀಸರು ನನ್ನ, ಚಾಸಾ 2 ರಿಂದ 4 ರವರ ಸಮಕ್ಷಮ ನಿ.ಪಿ. 2 ರಂತೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ನಿಪಿ 2 ನ್ನು ಜರುಗಿಸುವ ಕಾಲಕ್ಕೆ ಒಂದು ಭಾವಚಿತ್ರ ತೆಗೆದಿರುತ್ತಾರೆ. ಪಂಚನಾಮೆ ಜರುಗಿಸುವ ಕಾಲಕ್ಕೆ ಚಾಸಾ 2 ರಿಂದ 4 ರವರು ನನ್ನ ಜೊತೆ ಸಹಿ ಮಾಡಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರಃ

ಪ್ರಶ್ನೆಃ 4 ಚಾಸಾ-2 ಅಣ್ಣಪ್ಪರವರು  ತಮ್ಮ ಸಾಕ್ಷ್ಯದಲ್ಲಿ ಸದರಿ ಸಹಿಯನ್ನು ದಿಃ 25-03-2022 ರಂದು ಪಂಚನಾಮೆಯನ್ನು ಗಲಾಟೆಯ ವಿಚಾರವಾಗಿ  ತಾಲ್ಲೂಕು ಕಚೇರಿಯಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆವರೆಗೆ ಜರುಗಿಸಿರುತ್ತಾರೆ . ನನ್ನ ಜೊತೆ ಚಾಸಾ 1 ಮತ್ತು 3 ರವರು ಹಾಜರಿದ್ದರು. ಮಹಜರ್ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ .  ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರಃ

ಪ್ರಶ್ನೆಃ 5 ಚಾಸಾ-3 ದೇವರಾಜ್ ರವರು ತಮ್ಮ ಸಾಕ್ಷ್ಯದಲ್ಲಿ ಸದರಿ ದಿಃ 25-04-2022 ರಂದು ಪಂಚನಾಮೆಯನ್ನು ಗಲಾಟೆಯ ವಿಚಾರವಾಗಿ  ತಾಲ್ಲೂಕು ಕಚೇರಿಯಲ್ಲಿ ಮಧ್ಯಾಹ್ನ ದಿಃ 25-03-2022 ರಂದು ಪಂಚನಾಮೆಯನ್ನು ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆವರೆಗೆ ಜರುಗಿಸಿರುತ್ತಾರೆ,  ನನ್ನ ಜೊತೆ ಚಾಸಾ 1, 2 ಮತ್ತು ಹನುಮಂತಪ್ಪ  ರವರು ಹಾಜರಿದ್ದು ಸಹಿ ಮಾಡಿರುತ್ತಾರೆ. ಮಹಜರ್ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ . ಎಂದು  ಸಾಕ್ಷ್ಯವನ್ನು ನುಡಿದಿರುತ್ತಾರೆ  ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರಃ

ಪ್ರಶ್ನೆಃ 6 ಚಾಸಾ-6 ರವಿ ಸಿ ರವರು ತಮ್ಮ ಸಾಕ್ಷ್ಯದಲ್ಲಿ ದಿಃ07.03.2022 ರಂದು ನಾನು ಠಾಣಾಧಿಕಾರಿ ಕರ್ತ್ಯವ್ಯದಲ್ಲಿದ್ದಾಗ ಬೆಳಗ್ಗೆ 11.00 ಗಂಟೆಗೆ  ಚಾಸಾ 1ರವರು ಠಾಣೆಗೆ ಹಾಜರಾಗಿ ನೀಡಿದ ಅರ್ಜಿಯನ್ನು ಸ್ವೀಕರಿಸಿ ಠಾಣ ನೇರ ಅರ್ಜಿ ಸಂ.61/2022 ರಂತೆ ನೊಂದಾಯಿಸಿಕೊಂಡು ಅರ್ಜಿದಾರರಿಗೆ ಸ್ವೀಕೃತಿ ನೀಡಿರುತ್ತೇನೆ. ದಿಃ 11.03.2022 ರಂದು ಆರೋಪಿಯನ್ನು ಠಾಣೆಗೆ  ಕರೆಸಿ ಅರ್ಜಿದಾರರ ಸಮಕ್ಷಮ ವಿಚಾರಣೆ  ಮಾಡಿ ಆರೋಪಿಯಿದಂದ ಹೇಳಿಕೆ ಪಡೆದಿರುತ್ತೇನೆ. ಆರೋಪಿಗೆ  ಸೂಕ್ತ  ತಿಳುವಳಿಕೆ ನೀಡಿ ಅರ್ಜಿಯನ್ನು ಮುಕ್ತಾಯಗೊಳಿಸಿ ಹಿಂಬರಹ ನೀಡಿರುತ್ತೇನೆ. ಅರ್ಜಿದಾರು ಸದರಿ ಹಿಂಬರಹ ಪಡೆಯದೇ ತನಗೆ ಪ್ರ ವ ವ ಯನ್ನು ದಾಖಲಿಸಿಸಲು ಕೋರಿರುತ್ತಾರೆ. ದಿಃ  24.03.2022  ರಂದು  ನ್ಯಾಯಾಲಯ

ಅನುಮತಿ ಪಡೆದು ಪ್ರ ವ ವ ಯನ್ನು ಠಾಣಾ ಗು.ಸಂ.126/2022 , ಕಲಂ 506ರ ಅಡಿ ಐ ಪಿ ಸಿ ಅಡಿ ಪ್ರಕರಣ ದಾಖಲಿಸಿ ಪ್ರ ವ ವ ಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಡಿರುತ್ತೇನೆ. ದಿಃ 25.03.2022 ರಂದು ಪಂಚರಾದ ಚಾಸಾ.2 ಮತ್ತು 3 ರವರನ್ನು ಪಂಚಾಗಿ ಸಹಕರಿಸಲು ಕೋರಿ ಅವರಿಗೆ ನೋಟೀಸ್ ಜಾರಿ ಮಾಡಿ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ 12.00 ರಿಂದ 1.00 ಗಂಟೆಯವರಗೆ ಪಂಚನಾಮೆ ಜರುಗಿಸಿರುತ್ತೇನೆ. ಸದರಿ ಸಮಯಕ್ಕೆ ಚಾಸಾ.5 ರವರ ಮೊಬೈಲ್ ಮೂಲಕ ಪೋಟೋ ತೆಗೆಸಿರುತ್ತೇನೆ. ನಿಪಿ.2 ಕ್ಕೆ ಚಾಸಾ.1 ರಿಂದ 3 ರವರ ಸಹಿ ಪಡೆದಿರುತ್ತೇನೆ ಅದೇ ದಿನ ಚಾಸಾ.4 ರವರ ಹೇಳಿಕೆ ಪಡೆದಿರುತ್ತೇನೆ.ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರಃ

ಪ್ರಶ್ನೆ7.ಚಾಸಾ-6 ರವರು ಮುಂದುವರೆದು ದಿಃ 26.03.2022 ರಂದು ಈ ಪ್ರಕರಣದ ಆರೋಪಿತನಿಗೆ ಕಲಂ 41 (ಎ) ಸಿ ಆರ್ ಪಿಸಿ ಅಡಿ ನೋಟೀಸ್ ಜಾರಿ ತನಿಖೆಗೆ ಸಹಕರಿಸಲು ಕೋರಿರುತ್ತೇನೆ. ಚಾಸಾ.5 ರವರಿಂದ ಭಾ.ಸಾ.ಅ.ನಿಯಮ 65(ಬಿ) ರ ಅಡಿ ಪ್ರಮಾಣ ಪತ್ರ ಪಡೆದಿರುತ್ತೇನೆ. ದಿನಾಂಕಃ 16.12.2022 ರಂದು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ದ ಆರೋಪ ಸಾಭಿತಾದ್ದರಿಂದ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರತ್ತೇನೆ. ಆರೋಪಿಯನ್ನು ನೋಡಿರುತ್ತೇನೆ. ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಅದಕ್ಕೆ ನೀವೇನು ಹೇಳುತ್ತಿರಿ ?

ಉತ್ತರಃ

ಪ್ರಶ್ನೆ-8)ನಿಮ್ಮ ಪರವಾಗಿ ಸಾಕ್ಷಿಗಳು ಇವೆಯೆ? ಸಾಕ್ಷಿಗಳು ಇದ್ದರೆ ಹೆಸರು ಹಾಗೂ ವಿಳಾಸ ತಿಳಿಸಿ?

ಉತ್ತರಃ

ಪ್ರಶ್ನೆ-9) ನೀವು ಹೆಚ್ಚಿ ಗೇನಾದರೂ ಹೇಳಲು ಇಚ್ಛಿಸುವಿರಾ?
ಉತ್ತರಃ

(        ಆರೋಪಿ  ಹೇಳಿಕೆಗಳನ್ನು ಆರೋಪಿ ಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಕೇಳಿ ಅವರು ಕೊಟ್ಟ ಉತ್ತರಗಳನ್ನು ಅವರು ಕೊಟ್ಟಂತೆ ಬರೆದುಕೊಳ್ಳಲಾಗಿರುತ್ತದೆ ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

ಸ್ಥಳಃ ಚನ್ನಗಿರಿ
ದಿನಾಂಕಃ 16-08-2025

**1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್.ಸಿ**
**ನ್ಯಾಯಾಧೀಶರು. ಚನ್ನಗಿರಿ**

**ಆರೋಪಿ  ಸಹಿ:**